ಛಾಯಾಚಿತ್ರ ಮುದ್ರಣಗಳು ಹಿಂದಿನ ಕಾಲದ ಪ್ರಕ್ರಿಯೆಗಳಿಂದಾಗಿಯೇ ತಮ್ಮ ಅಸ್ತಿತ್ವವನ್ನು ಕಂಡುಕೊಂಡಿವೆ.

1990ರ ಉತ್ತರಾರ್ಧದಲ್ಲಿ ನಾನು ಫಿಲ್ಮ್ ಕ್ಯಾಮೆರಾವೊಂದರ ಜೊತೆ ಛಾಯಾಗ್ರಹಣ ಕ್ಷೇತ್ರಕ್ಕೆ ಪದಾರ್ಪಣೆ ಮಾಡಿದ್ದರೂ, ಮುಂದೆ ಡಿಜಿಟಲ್ ಛಾಯಾಗ್ರಹಣ ಕಾರ್ಯವನ್ನು ಉತ್ಸುಕತೆಯಿಂದಲೇ ಆರಂಭಿಸಿದ್ದೆ. ನನ್ನ ಆಗಿನ ಗ್ರಾಹಕರು ಮತ್ತು ಎಡಿಟರ್‌ಗಳು ಈ ರೂಪಾಂತರ ಅಗತ್ಯವೆಂದು ಆಗ್ರಹಿಸಿದ್ದರು. ನನಗೂ ಇದು ಆರ್ಥಿಕವಾಗಿ ಸರಿಯೆನಿಸಿತ್ತು. ಮೂರು ದಿನದ ಅಸೈನ್‌ಮೆಂಟ್‌ಗೆ ಬರೀ ನಾಲ್ಕು ಫಿಲ್ಮ್ ರೋಲ್‌ಗಳನ್ನು ಮಾತ್ರ ಉಪಯೋಗಿಸಬೇಕೆನ್ನುವ ನಿರ್ಬಂಧ ಇನ್ನು ಮುಂದೆ ನನಗಿರಲಿಲ್ಲ. 2006ರಲ್ಲಿ ಎಂಟು ಮೆಗಾಪಿಕ್ಸೆಲ್‌ಗಳಲ್ಲಿ ಚಿತ್ರೀಕರಿಸಬಹುದಾದ ನನ್ನ ಹೊಸ ಕ್ಯಾನನ್ 30ಡಿ ಡಿಎಸ್‌ಎಲ್‌ಆರ್ (ನನ್ನ ಸಹೋದರ ಲೋಕೇಶರ ಉದಾರ ಕೊಡುಗೆ) ಬಳಸಿಕೊಂಡು ಡಿಜಿಟಲ್ ಛಾಯಾಗ್ರಹಣದಲ್ಲಿ ನನ್ನ ಕೆಲಸ ಶುರುಮಾಡಿದೆ. ಅಂದು ತೆಗೆದ ಛಾಯಾಚಿತ್ರಗಳಿಗೆ ಹೋಲಿಸಿದರೆ ಇಂದಿನ ಫೋನ್ ಕ್ಯಾಮೆರಾಗಳು ಇನ್ನೂ ಹೆಚ್ಚಿನ ರೆಸಲ್ಯೂಷನ್ ಛಾಯಾಚಿತ್ರಗಳನ್ನು ತೆಗೆಯುತ್ತವೆ.

ಡಿಜಿಟಲ್ ಪರಿಸರದ ಅನುಕೂಲತೆ, ನೈಜತೆ ಮತ್ತು ಅಪರಿಮಿತತೆಯನ್ನು ನಿರ್ಲಕ್ಷಿಸಲು ನನಗೆ ಸಾಧ್ಯವಾಗುತ್ತಿರಲಿಲ್ಲವಾದರೂ ಏನೋ ಒಂದು ಕಳೆದುಹೋದಂತೆ ಭಾಸವಾಗುತ್ತಿತ್ತು. ಛಾಯಾಗ್ರಹಣ ನೀಡುತ್ತಿದ್ದ ಸಂತಸ ಎನ್ನುವುದು ಕೊನೆಯೇ ಇಲ್ಲದಂತಿದ್ದ ಸ್ಪೇಸ್ ಹೊಂದಿರುವ ಮೆಮೊರಿ ಕಾರ್ಡ್‌ಗಳಲ್ಲಿ, ಹಾರ್ಡ್ ಡ್ರೈವ್‌ಗಳಲ್ಲಿ ಅಥವಾ ಮಿನುಗುವ ಮಾನಿಟರ್‌ಗಳಲ್ಲಿ ಕೆಲವೇ ಕ್ಷಣಗಳಲ್ಲಿ ಮಾಸಿಹೋಗಲಾರಂಭಿಸಿತು. ಇಂತಹ ಛಾಯಾಚಿತ್ರ ಮಾಡುವ ಪ್ರಕ್ರಿಯೆ ನನಗೆ ಪೋಷಣೆ ನೀಡುವ ಕೆಲಸವೆಂದು ಅನ್ನಿಸುತ್ತಿರಲಿಲ್ಲ. ಅನಲಾಗ್ ಕ್ಯಾಮೆರಾಗಳಲ್ಲಿ ನಾನು ಅನುಭವಿಸಿದ ಉತ್ಸುಕತೆ, ಡಿಜಿಟಲ್ ಕ್ಯಾಮೆರಾ ಹಿಡಿದಾಗ ನನ್ನ ಅನುಭವಕ್ಕೆ ಬರುತ್ತಿರಲಿಲ್ಲ. ಛಾಯಾಗ್ರಹಣವನ್ನು ನನ್ನ ವೃತ್ತಿಯಾಗಿಸಿಕೊಳ್ಳುವ ಆಯ್ಕೆಯ ಬಗ್ಗೆ ನನಗೆ ಅನುಮಾನ ಮೂಡಲಾರಂಭಿಸಿತ್ತು.

ಗೋವಾದಲ್ಲಿನ 'ಸಿಎಪಿ ರೆಸಿಡೆನ್ಸಿ' ಕಾರ್ಯಕ್ರಮ ಬರೇ ನಮ್ಮ ಕೈಗಳನ್ನು ಕೊಳಕಾಗಿಸಿಕೊಂಡು ಡಾರ್ಕ್‌ರೂಮಿನಲ್ಲಿ ನಮ್ಮ ವಿಧಾನಗಳನ್ನು ಉತ್ತಮಗೊಳಿಸುವ ಯತ್ನದಲ್ಲಿ ಗಂಟೆಗಟ್ಟಲೆ ಸಮಯವನ್ನು ಕಳೆಯುವುದಷ್ಟಕ್ಕೇ ಸೀಮಿತವಾಗಿರಲಿಲ್ಲ. ಈ ಕಾರ್ಯಕ್ರಮ ಸುದೀರ್ಘ ವಾಕಿಂಗ್, ಗಣಿಗಾರಿಕಾ ಪಟ್ಟಣಗಳಿಗೆ ಭೇಟಿ, ಹೈಕುಗಳ ಬರವಣಿಗೆ, ಕೊನೆಯಿಲ್ಲದಂತೆ ಕಿಂಗ್ ಬಿಯರ್ ಆಸ್ವಾದನೆಯ ಮೂಲಕ ಸುತ್ತಲಿನ ಪರಿಸರ ಮತ್ತು ಗೋವೆಯ ಸಂಸ್ಕೃತಿಯ ಅನ್ವೇಷಣೆ ಮತ್ತು ನಾವು ಅನುಭವಿಸಿದ್ದನ್ನು ವ್ಯಕ್ತಪಡಿಸಲು ಸೂಕ್ತವಾದ ಮಾಧ್ಯಮವನ್ನು ಕೊನೆಗೆ ಕಂಡುಹಿಡಿಯುವುದರ ಕುರಿತೂ ಆಗಿತ್ತು. ನನ್ನ ಪಾಲಿಗೆ ಇದು ಪ್ರವಾಸಿ ಬೀಚ್‌ಗಳಾಚೆಗಿನ ಗೋವಾವನ್ನು ಅರಿಯುವ ಖಾಸಗಿ ಅನ್ವೇಷಣೆಯಾಗಿತ್ತು. ಇದು ನನ್ನೆಡೆಗೆ ಎಸೆದ ಸವಾಲುಗಳನ್ನು ನಾನು ಆನಂದಿಸುತ್ತಿದ್ದೆ.

'ಸಿಎಪಿ ರೆಸಿಡೆನ್ಸಿ'ಯ ಬಳಿಕ ನಾನು ಅನಲಾಗ್ ಛಾಯಾಗ್ರಹಣದ ಹಂಬಲ ಯಾವಾಗ ಮೂಡುತ್ತದೆಯೋ ಆಗ ಆ ಜಗತ್ತಿಗೆ ತೆರಳಬಹುದು ಎಂಬ ಸಮಾಧಾನದೊಂದಿಗೆ, ಫೋಟೊಗ್ರಫಿಯೊಂದಿಗೆ ಶಾಂತಿಸಂಧಾನ ಮಾಡಿಕೊಂಡೆ. ನಮಗೆ ಇಲ್ಲಿಯವರೆಗೆ ನಂಬಿಸಲಾಗಿದ್ದ ಹಾಗೆ ಛಾಯಾಗ್ರಹಣ ಕಪ್ಪು–ಬಿಳಿ ಅಥವಾ ಬಣ್ಣಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಬದಲಾಗಿ ಬಣ್ಣಗಳು, ಟೆಕ್ಸ್‌ಚರ್‌ಗಳು, ಛಾಯೆ ಮತ್ತು ಸರ್ಫೇಸ್‌ಗಳು– ಇವೆಲ್ಲವೂ ಒಳಗೊಂಡ ಕೈಯಲ್ಲೇ ನಿರ್ವಹಿಸಬಹುದಾದ ಒಂದು ಬಹುಮುಖಿ ಪ್ರಕ್ರಿಯೆಯಾಗಿತ್ತು.

ವೈಯಕ್ತಿಕವಾಗಿ ಇದು ನನ್ನನ್ನು ನಿಧಾನಗತಿಗೆ ಮರಳಿಸಿತು. ಡೆಕಲ್ ತುದಿಯ ಹಾಳೆಗಳ ಮೇಲೆ ಸೆನ್ಸಿಟೈಸರ್ ಹಚ್ಚುತ್ತಿರುವಾಗ ಬರುವ ಚಿಂತನೆಗಳಿಗೆ ಸಮಯ ಮಾಡಿಕೊಳ್ಳುವುದನ್ನು ಮತ್ತು ಹಾಳೆಗಳು ಒಣಗುವುದನ್ನು ಕಾಯುತ್ತಿರುವಾಗ ನನಗೋಸ್ಕರ ಒಂದು ಲೋಟ ಚಹಾ ಮಾಡಿಕೊಳ್ಳುವುದರ ಬಗೆಗಾಗಿತ್ತು. ಒಂದು ವೇಳೆ ನನ್ನ ಫೋಟೊಗ್ರಫಿಯ ವಸ್ತು ಮೆಮೊರಿ ಅಥವಾ ಕಳೆದುಕೊಳ್ಳುವುದಕ್ಕೆ ಸಂಬಂಧಿಸಿದ್ದರೆ ನಾನು ಸಯಾನೋಟೈಪುಗಳನ್ನು ಆಯ್ಕೆ ಮಾಡಬಹುದಾಗಿತ್ತು, ಸೇಪಿಯಾ ಬಳಸಬೇಕೆಂದಿದ್ದರೆ, ಟೆಕ್ಸ್‌ಚರ್‌ಗಳನ್ನು ತೋರಿಸಬೇಕೆಂದಿದ್ದರೆ ಲವಣ ಮುದ್ರಣಗಳು ಅಥವಾ ವಾನ್‌ಡೈಕ್ ಬ್ರೌನುಗಳನ್ನು ಉಪಯೋಗಿಸಬಹುದಿತ್ತು. ಅಥವಾ ಇನ್ನೊಂದು ಲೋಕಕ್ಕೆ ಒಯ್ಯುವ ಕಾಲಾತೀತ ಭಾವಚಿತ್ರಗಳನ್ನು ಮಾಡಬೇಕೆಂದಿದ್ದರೆ ವೆಟ್ ಪ್ಲೇಟುಗಳು. ಒಟ್ಟಿನಲ್ಲಿ ಇದೊಂದು ಬಿಡುಗಡೆ ಗಳಿಸಿಕೊಳ್ಳುವ ವಿಚಾರವಾಗಿತ್ತು. ಛಾಯಾಚಿತ್ರವೊಂದರ ಪಯಣ ದೀರ್ಘಕಾಲದ್ದು; ಯಂತ್ರವೊಂದು ಉಗುಳಿದ ಪ್ರಿಂಟಿಗಿಂತಲೂ ಹೆಚ್ಚು ಸಂತೃಪ್ತಿ ನೀಡುವಂಥದ್ದು ಎನ್ನುವುದನ್ನು ಚೆನ್ನಾಗಿ ಅರಿತು ನಾನು ಛಾಯಾಚಿತ್ರ ಸೆರೆಹಿಡಿಯುವ ಕೆಲಸಕ್ಕೆ ಹಿಂದಿರುಗಿದೆ.

'ಸಿಎಪಿ ರೆಸಿಡೆನ್ಸಿ'ಯಲ್ಲಿ ನಮಗೆ ಸ್ವಲ್ಪ ಸಮಯ ಮಾರ್ಗದರ್ಶನ ನೀಡಿದ್ದ ಕಲಾವಿದ ಮತ್ತು ಮುದ್ರಣ ತಯಾರಕರಾದ ಅರ್ಪಣ್ ಮುಖರ್ಜಿಯವರಿಂದ ನಾನು ಪ್ರಭಾವಿತನಾಗಿದ್ದೆ. ನಾವು ಆಗಾಗ ಸಂಪರ್ಕದಲ್ಲಿದ್ದೆವು. ಅವರು ಶಾಂತಿನಿಕೇತನದಲ್ಲಿ 'ಗೋಪ್ಪೋ' ಎನ್ನುವ ಸ್ಟುಡಿಯೊ ಸ್ಥಾಪಿಸುವುದಾಗಿ ಘೋಷಿಸಿದಾಗ, ಅನಲಾಗ್‌ಗಾಗಿ ನಾನು ಮಾಡಿದ ಪ್ರತಿಜ್ಞೆಗಳನ್ನು ನವೀಕರಿಸುವ ಸಮಯ ಬಂದಿದೆ ಎಂದು ನನಗೆ ಗೊತ್ತಾಯಿತು.

ಶಾಂತಿನಿಕೇತನದ ಪ್ರಶಾಂತತೆ, ಎಲ್ಲೆಲ್ಲೂ ಪಸರಿಸಿದ್ದ ನಿರಾಡಂಬರತೆ ಮತ್ತು ನಿಧಾನಗತಿಯ ಬದುಕು ನನ್ನನ್ನು ತುಂಬಾ ಸೆಳೆದಿತ್ತು. ಎಷ್ಟೆಂದರೆ, ಅಲ್ಲಿಯೇ ಹೋಗಿ ಇರಲು ಆಸೆ ಮೂಡಿತ್ತು! ಗೋಪ್ಪೋ ಸ್ಟುಡಿಯೊದಲ್ಲಿ ಸತತವಾಗಿ ಸವಿಯುತ್ತಿದ್ದ ಚಹಾ ಮತ್ತು ನಡೆಸುತ್ತಿದ್ದ ಸುದೀರ್ಘ ಸೈಕಲ್ ಸವಾರಿಗಳ ನಡುವೆ ನಾನು ಲಾರ್ಜ್ ಫಾರ್ಮ್ಯಾಟ್ ಕ್ಯಾಮೆರಾದ ಮೂಲಕ ಅಲೌಕಿಕವೆನಿಸುವ ಮುದ್ರಣಗಳನ್ನು ಗಾಜಿನ ಮೇಲೆ ಮೂಡಿಸುವ ಆಂಬ್ರೋಟೈಪ್ ಎಂಬ ವಿಧಾನವನ್ನು



ಶಾಂತಿನಿಕೇತನದ 'ಗೋಪ್ಪೋ'ದಲ್ಲಿ ಮಾಡಿದ ಒಂದು ಆಂಬ್ರೋಟೈಪ್ ಮುದ್ರಣ



ಕ್ಯಾಲಂಗೂಟ್‌ನ ಬೇಕರಿಯ ಪೊದೇರ್ ಒಬ್ಬರ ಉಪ್ಪು ಕಾಗದದ ಮುದ್ರಣ